Regd No. M 1299 SATYAVADI Founded 1917

Doc-118 T-P-2

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 15] ಬುಧವಾರ 8—10—47 [ಬಿಡಿ ಪ್ರತಿ 3 ಪೈ

ಈ ದಿವಸ ನಿರ್ಧಾರವಾಗಲಿದೆ

ಅ 7 — ಚಿಕ್ಕಮಗಳೂರು ಜೈಲಿನಿಂದ ಕಾಂಗ್ರೆಸ್ ಮುಖಂಡರು ಬಂಧನದಿಂದ ಬಿಡುಗಡೆಯಾದರು. ಆನಂದೋತ್ಸಾಹಗಳಿಂದ ಪ್ರಜಾಗಣ ಅವರುಗಳಿಗೆ ಸು ಸ್ವಾಗತವಿತ್ತಿತು. ಕಾಂಗ್ರೆಸ್ ಅಧ್ಯಕ್ಷ ಪುತ್ತ ನಾಯಕರು ಸೆರೆದಿದ್ದ ಮಂ ದಿಗೆ ಸಂದೇಶವಿತ್ತರು. ಸತ್ಯಾಗ್ರಹ ನಡೆಯುವುದು ಬಿಡುವುದು ನಾಳೆ ಬೆಂಗ ಬೆಂಗಳೂರಿನಲ್ಲಿ ಸೇರುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾಗುವುದು. ಅಲ್ಲಿಯವರೆಗೆ ಚಳುವಳಿ ನಡೆಯುತ್ತಿರುವುದು ಎಂದು ತಿಳಿಸಿದರು. ಸತ್ಯಾಗ್ರ ಹ ನಿಲ್ಲಬಹುದೆಂದು ಹೇಳಿಕೆಯ ಅಭಿಪ್ರಾಯವಿದೆ.

ಅರವತ್ತು ಸಾವಿರ ಕೊಲೆ !

ಪಾಕೀಸ್ತಾನದಲ್ಲಿ ಸೇರಿರುವ ಭವಾಲ್ಪುರ ಸಂಸ್ಥಾನದಲ್ಲಿ ಸುಮಾರು ಅರವತ್ತು ಸಾವಿರ ಮುಂದಿ ಹಿಂದೂ ಮತ್ತು ಸಿಕ್ಖರುಗಳ ಹತ್ಯೆ ನಡೆದಿದೆ

ಮುಸ್ಲಿಮೇತರು ಧೇಶಾಂತರಗತರಾ ದಾಗ ಪಾಕೀಸ್ತಾನ ಪ್ರಭುತ್ವ ಸುದ್ದಿಗ ಳ ಮೇಲೆ ಕಾನೂನು ಜಾರಿಮಾಡಿತ್ತು.

ಪಾಕೀಸ್ತಾನ ಸ್ಥಾಪನೆಯಾದ ತರು ಣದಲ್ಲೇ, ಆಗಸ್ಟ್ 19 ರಲ್ಲಿ ಹಿಂದೂ ಮತ್ತು ಸಿಕ್ಖರನ್ನು ಕೊಲ್ಲಿ. ಅವರ ಆಸ್ತಿಗಳೆಲ್ಲವೂ ಪಾಕೀಸ್ತಾನಕ್ಕೆ ಸೇರಿ ದ್ದು ಎಂದು ಹಸ್ತಪತ್ರ ಹೊಂಚಿದರು

ನೂರಾರುಗಟ್ಟಲೆ ಸ್ತ್ರೀಯರು ಬಲ ವಂತದಿಂದ ಮಹಮದೀಯರಿಗೆ ಮದುವೆ ಮಾಡಲ್ಪಟ್ಟಿದ್ದಾರೆ.

ಸಾವಿರಾರು ಮಂದಿ ಮತಾಂತರಗೊ ಳಿಸಲ್ಪಟ್ಟಿದ್ದಾರೆ.

ಎಂಬತ್ತು ಸಾವಿರ ಮಂದಿ ಉಳಿದವ ರು ರಕ್ಷಣೆಗಾಗಿ ಭಾರತ ಸರ್ಕಾರವ ನ್ನು ಕೋರಿದ್ದಾರೆ.

ಭಾರತಕ್ಕೆ ಸಹಾಯ

ಸೈಗಾನ್ ಅ 6— ವಿಯಟ್ನಾಂ ಅಧ್ಯಕ್ಷ ಹೋಚಿಮಿಂಚ್ ಭಾರತದ ಪೆಹಾಪಳಿ ನಿರಾಶ್ರಿತರ ಸಹಾಯಕ್ಕಾಗಿ ಹತ್ತು ಲಕ್ಷ ಫ್ರಾಂಕು ಕೊಡುವುದಾಗಿ ಪಂ ನೆಹರೂರವರಿಗೆ ತಿಳಿಸಿದ್ದಾರೆ.

ಕಾಂಗ್ರೆಸ್ ವಾರ್ತೆ

ಪ್ರ. ಪ್ರ. ಸಭೆ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬಿಡುಗಡೆಯಾದರು.

ಶ್ರೀಮನ್ಮಹಾರಾಜರೊಡನೆ ಕಾಂಗ್ರೆಸ್ ನಾಯಕರು ಭೇಟಿ ಮಾಡುವುದು ಅಗತ್ಯವೆಂದು ಶ್ರೀ ಎಲ್. ಎಸ್. ರಾಜು ಪೇಳಿದ್ದಾರೆ.

ಬೆಂಗಳೂರಿನ ಕಾಂಗ್ರೆಸ್ ಭವನವನ್ನು ಕಾಂಗ್ರೆಸ್ ಮುಖಂಡರ ಸುಪರ್ದಿಗೆ ಮಿಲಿಟರಿಯವರು ವಾಪಸ್ಸಿತ್ತಿದ್ದಾರೆ.

ಮೈಸೂರು ಅ 8— ಇಲ್ಲಿಯ ಎರಡು ಸಾವಿರ ರೈಲ್ವೇ ಕೆಲಸಗಾರರಲ್ಲಿ 200 ಮಂದಿ ಕೆಲಸಕ್ಕೆ ಹೋದರೆಂದು ತಿಳಿಯಬಂದಿದೆ.

ನವದೆಹಲಿ ಅ 6— ದೆಹಲಿಯ ಮುಸೀದಿಯೊಂದರಲ್ಲಿ ಬಿದ್ದ ನೆಲೆಮಾಳಿಗೆಯಲ್ಲಿ ಶಸ್ತ್ರಾಸ್ತ್ರ ಶಯಾರಾಗುತ್ತಿದ್ದುದನ್ನು ಪೋಲೀಸರು ಪತ್ತೇ ಹಚ್ಚಿದ್ದಾರೆ. ಆ ಬೀದಿಗಳಲ್ಲಿ ವಾಸ ಮಾಡುತ್ತಿದ್ದ ಹಿಂದೂಗಳಿಗೆ ಗೊತ್ತೇ ಇರಲಿಲ್ಲ !

ರಂಗೂನ್ ಅ 6— 1948 ನೇ ಇಸ್ವಿ ಜನವರಿ 2 ರಲ್ಲಿ ಬರ್ಮಾ ಸ್ವಾತಂತ್ರ್ಯ ಸ್ವೀಕಾರ ಮಾಡುವುದಾಗಿ ಬರ್ಮಾ ಮಂತ್ರಿಮಂಡಲ ನಿರ್ಧರಿಸಿದೆ.

ಪಾನ ನಿರೋಧ ಜಾರಿಯಾಗಿರುವ ಪ್ರದೇಶಗಳಲ್ಲೆಲ್ಲಾ ಕುಡಿತದ ಸುಳುವು ಕಂಡರೆ ಅದನ್ನು ಅಪರಾಧವೆಂದು ಪರಿಗಣಿಸಲ್ಪಡುವುದೆಂದು ಮದರಾಸು ಪ್ರಭುತ್ವ ತೀರ್ಮಾನಿಸಿದೆ.

ಜವಾಬ್ದಾರಿ ಸರಕಾರ

— 3 —

ಮಂತ್ರಿಗಳೆಂದ ಮೇಲೆ ಅವರವರಿಗೆ ವಹಿಸಿಕೊಟ್ಟು ದಪ್ತರಗಳ ವಿಷಯದಲ್ಲಿ ಅವರು ಪೂರ್ಣಾಧಿಕಾರವುಳ್ಳವರಾಗಿರ ಬೇಕು. ಈಗ ಸಲಹೆ ಮಾಡಲಾದ ಸುಧಾರಣೆಯ ಪ್ರಕಾರ 'ಮಂತ್ರಿ' ಹೆಸರನ್ನು ಹೊಂದುವುದಕ್ಕಿಂತಲೂ ಹೆಚ್ಚಿನದು ಅಂದರೆ ಉಪಯುಕ್ತವಾದ ಯಾವ ಅಧಿಕಾರವೂ ಆ ಮಂತ್ರಿಗಳಿಗೆ ಇರುವುದಿಲ್ಲವೆಂಬುದು ಒಡೆದು ಕಾಣುತ್ತದೆ. ಸಾಧಾರಣವಾಗಿ ಸರಕಾರಿ ಆಡಳಿತವನ್ನು ನೋಡಲು ಅವರಿಗೆ ಅಧಿಕಾರವಿರುತ್ತಿ ಯಾದರೂ ತಮ್ಮ ಅಧಿಕಾರವನ್ನು ನಡೆ ಸುವುದರಲ್ಲಿ ಅವರಿಗೆ ಅಸಮರ್ಥತೆ ಅಷ್ಟೇ ಇರುತ್ತದೆ. 'ಪಬ್ಲಿಕ್ ಸರ್ವಿಸ್ ಕಮಿಷನ್' ಮತ್ತು 'ಮಿಲಿಟರಿ' ಇವೆರಡೂ ಕಾಯಿಟ್ಟ ವಿಷಯಗಳಲ್ಲಿ ಸೇರಿರುವುದರಿಂದ ಆಡಳಿತದ ಮೇಲೆ ಅವರಿಗೆ ಹತೋಟಿ ಇರುವುದಿಲ್ಲ. ತಮ್ಮ ಕೈ ಕೆಳಗಿನ ಅಧಿಕಾರಿಗಳು ಸರಕಾರದ ಶಿಸ್ತಿಗೆ ವಿರೋಧವಾಗಿ ನಡೆದರೆ (ಸಾಮಾನ್ಯವಾಗಿ ಎಲ್ಲರೂ ಮಂತ್ರಿಗಳಿಗೆ ವಿಧೇಯರಾಗಿಯೇ ಇರುತ್ತಾರೆ ಎಂದು ಇಟ್ಟು ಕೊಳ್ಳಬಹುದು) ಅಂತಹ ಅಧಿಕಾರಿಗಳ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನು ಜಾರಿ ಮಾಡಲು ಆ ಮಂತ್ರಿಗಳಿಗೆ ನೇರವಾಗಿ ಅಧಿಕಾರವಿಲ್ಲ. ಮಂತ್ರಿಗಳು 'ಪಬ್ಲಿಕ್ ಸರ್ವಿಸ್ ಕಮಿಷನ್' ನ ಮುಖ ನೋಡುತ್ತಾ ಕೂತಿರಬೇಕಾಗುತ್ತದೆ. 'ಸರ್ಕಾರದಲ್ಲಿ ನೌಕರಿ ಕೊಡುವುದು, ನೌಕರಿಯಲ್ಲಿ ಬಡ್ತಿ ಕೊಡುವುದು, ತಲಬು ನಿಶ್ಚಯಿಸುವುದು, ವರ್ಗಾವರ್ಗ ಮಾಡುವುದು, ನೌಕರರನ್ನು ಬರ್ಕರಫ್ ಮಾಡುವುದು' ಇತ್ಯಾದಿ ಎಲ್ಲವೂ ಪಬ್ಲಿಕ್ ಸರ್ವಿಸ್ ಕಮಿಷನ್ ಕೆಲಸವಾಗಿರುತ್ತದೆ. ಹೀಗಿರುವ ಅಧಿಕಾರಿಗಳಿಗೆ, ಸಾಮಾನ್ಯ ನೌಕರನಿಗೂ ಕೂಡಾ ಮಂತ್ರಿಗಳ ಹಂಗೆನು ? ಆಡಳಿತ ದಿಗ್ ಇರುವುದಿಲ್ಲ. ಮಿಲಿಟರಿಯ ವಿಷಯದಲ್ಲಿಯೂ ಮಂತ್ರಿಗಳ ಸ್ಥಿತಿ ಇದೇ ರೀತಿ ಇರುತ್ತದೆ. 'ನ್ಯಾಯ ಮತ್ತು ಶಿಸ್ತು' [Law & Order] ದಪ್ತರು ಮಂತ್ರಿಗಳ ಸ್ವಾಧೀನವಿರುತ್ತದೆ. ದುರ್ದೈವದಿಂದ ಎಲ್ಲಿಯಾದರೂ ಒಂದು ಸ್ಥಳದಲ್ಲಿ ಗಲಾಟೆಯಾಗಿ ಅಶಾಂತಿಯುಂಟಾದರೆ ಆಗ ಗಲಾಟೆಯನ್ನು ಹತೋಟಿಗೆ ತಂದು ಶಾಂತಿ ಸ್ಥಾಪನೆ ಮಾಡಲು ಸಾಮಾನ್ಯ ಜನಗಳಂತೆ ಈ ಮಂತ್ರಿಗಳೂ ಸಹ ನೌಕರಶಾಹಿಯವರ ಮುಖವನ್ನು ನೋಡುತ್ತಾ ಇರಬೇಕಾಗುತ್ತದೆ.

ವಸ್ತುಸ್ಥಿತಿಯು ಈ ರೀತಿ ಇರುವುದರಿಂದ ಈ ಮಂತ್ರಿಗಳ ಸ್ಥಾನವು ಹೆಚ್ಚು ಕಮ್ಮಿ ಗ್ರಾಮಸಂಚಾಯಿತಿ ಅಧ್ಯಕ್ಷರಿಗಿಂತ ನಿಜಿಗಾದುದಲ್ಲ. ' ಹೀನ ಮರ್ಯಾದೆ ದೃಷ್ಟಿಯಿಂದ 'ಮಂತ್ರಿ' ಎಂಬ ಶಬ್ದವೇ ಘನತೆಯುಳ್ಳದ್ದು. ಇಷ್ಟೆನಲ್ಲಿ ಸದಾ ಬಿಕ್ಕಟ್ಟಿನ ಪರಿಸ್ಥಿತಿಯು ಇರುವುದರಿಂದ ಈ ಮಂತ್ರಿಮಂಡಲದ ರಚನೆಯು ನಿರುಪಯೋಗಿಯಾದುದು. ಇದರಿಂದ ದೇಶಕ್ಕೆ ಪ್ರಯೋಜನವಾಗುವ ಬದಲಿಗೆ, ಜನಗಳಲ್ಲಿ ಕೋಮುವಾರು ಭೇದಭಾವನೆಯು ಹೆಚ್ಚಿ ಅದರಿಂದ ದೇಶಕ್ಕೆ ಹೆಚ್ಚು ಹಾನಿಯೇ ತಟ್ಟುವ ಸಂಭವವಿದೆ.

ಕೆಲಸ ಮಾಡಲಾಗದಂಥಾ ಮಂತ್ರಿಮಂಡಲವನ್ನು ಸಲಹೆಮಾಡಿ ಅದಕ್ಕೆ 'ಜವಾಬ್ದಾರಿ ಸರ್ಕಾರ' ವೆಂದು ನಾಮಕರಣ ಮಾಡುವುದು ಮಹಾ ಸಾಹಸವು.

ಇನ್ನೂ ರಾಜರ ಘೋಷಣೆಯು 'ಷೆಡ್ಯೂಲ್ ೧' ರಲ್ಲಿಯ ವಿಷಯಗಳ ವಿಚಾರವಾಯಿತು.

ಇನ್ನು ಈ ಮಂತ್ರಿಮಂಡಲವು ದೇಶೊಬ್ಬರ ಅಧೀನದ 'ಜೋಹುಕುಂ ವಾಲಾ' ಆಗುವ ಪರಿಸ್ಥಿತಿಯು 'ಷೆಡ್ಯೂಲ್ ೨' ರಿಂದ ಉತ್ಪನ್ನವಾಗುತ್ತದೆ.

(ಸಶೇಷ)

ಬಿಕೆಟಿಂಗ್ ಮತ್ತು ದಸ್ತಗಿರಿ

ಮೈಸೂರು ಲಾ ಕೋರ್ಟ್ ದ್ವಾರಗಳ ಬಳಿ 10 - 12 ಗಂಟೆವರೆಗೆ ಬಿಕೆಟಿಂಗ್ ನಡೆಯುತ್ತಿತ್ತು.

ಮದ್ರಾಸ್ ವಕೀಲರಾದ ಶ್ರೀ ಜಯರಾಂ ರವರ ಸಹೋದರಿ ಶ್ರೀಮತಿ ಪ್ರಫುಲ್ಲ ದಸ್ತಗಿರಿಯಾದರು.

ಸುಶೀಲಾದೇವಿ, ಲಕ್ಷ್ಮಿಸರಸಮ್ಮ ಮತ್ತಿತರರೂ ದಸ್ತಗಿರಿಯಾಗಿದ್ದಾರೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆಣಾ

ಕಾಲಮಹಿಮೆ

† ಮಾಧವ ಪ್ರಧಾನಿಗಳ ಕಾಲದಲ್ಲಿ ಮೈಸೂರು ದೇಶ ಎ.ಆರ್.ಪಿ ಐತಿಹ್ಯಗಳನ್ನು ಕಂಡುಕೊಂಡಿತು !

† ಆರ್ಕಾಟರ ಆಡಳಿತದಿಂದ ಮೈಸೂರಿಗೆ ಕರ್ಫ್ಯೂ ಕಷ್ಟ ಚನ್ನಾಗಿ ಮನದಟ್ಟಾಯಿತು !

† ಕಾಲ ಮಹಿಮೆಯನ್ನಿನ್ನೇನು ಬಣ್ಣಿಸಲಿ ?! ವೈಭವಯುತ 'ಪವರಾತ್ರಿ' ಖಾಲೀ ಒಂಬತ್ತು ರಾತ್ರಿಗಳಾಗಹತ್ತಿವೆ !!

'ಕಾಲಭೈರವ'

ವುಡ್ ಲ್ಯಾಂಡ್ಸ್

ಆಮೋಘ 2 ನೇ ವಾರ.

ರಂಜನ — ಜೀವರ್ಸ — ಬೇಬಿ ಮಾಧುರಿ ಪಾತ್ರವಹಿಸಿರುವ

ನೈಮಾ

(ಅನೋಘ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

At Opera

From 4–10–47

PHANTOM

(Serial)

Edited, Printed and Published by M. S Krishna Rao at the Satyavadi Press Chamaarja Agrahar Mysore.

ಸುದ್ದಿಗಳು

ಭಾರತ ಡೊಮಿನಿಯನ್ನಿನಲ್ಲಿರುವ ತನ್ನ ಅಸುಯಾಯಿಗಳೆಲ್ಲರೂ ಆ ಡೊಮಿನಿಯನ್ನಿನಲ್ಲಿ ರಾಜಭಕ್ತಿಯಿಟ್ಟಿರಬೇಕೆಂದು ಮತಗುರು ಆಗಾಖಾನರು ಮಾರ್ಸೆಲ್ಸಿನಿಂದ ಬೊಂಬಾಯಿಗೆ ತಂತಿ ಕಳಿಸಿದ್ದಾರೆ

ಅಖಿಲ ಭಾರತ ಮೊವಿಷ್ ಪರಿಷತ್ತಿನ ಅಧ್ಯಕ್ಷರೂ ಮತ್ತು ಬಿಹಾರ್ ಪುನರ್ವಸತಿ ಸಚಿವರು ಆದ ಜ || ಅಬ್ದುಲ್ ಕ್ವಾಯಂ ಅನ್ಸಾರಿ ಪಾಕೀಸ್ತಾನ ಮುಸ್ಲಿಂರಿಗೆ ಮಾಡಿರುವ ಮನವಿಯಲ್ಲಿ ಮತ್ತೆ ಭಾರತದೊಡನೆ ಐಕ್ಯರಾಗಿಯೆಂದು ತಿಳಿಸಿರುವುದಾಗಿ ಕಲ್ಕತ್ತ ವಂದಿ.

ಕರಾಚಿ — ಸಿಂಧಿ ಮುಸ್ಲಿಂ ಮತ್ತು ಹಿಂದೂಗಳ ಜಂಟಿ ಸಭೆ ಕರಾಚಿಯ ಸುಕ್ಕೂರಿನಲ್ಲಿ ನಡೆಯಿತು. ಅಲ್ಪ ಸಂಖ್ಯಾತರಾದ ಹಿಂದೂಗಳನ್ನು ರಕ್ಷಣೆ ಮಾಡುತ್ತೇವೆ ಎಂದು ಮುಸಲ್ಮಾನರು ಖುರಾ ಮುಟ್ಟಿ ಪ್ರಮಾಣ ಮಾಡಿದ್ದಾರೆ.

ಹೊಷಿಯಾಪುರ ಜಿಲ್ಲೆ ಮತ್ತು ಬಾಸುಚಟಿಷಿಲ್'ಗಳಲ್ಲಿ ಹಿಂದೂಗಳು ಮತ್ತು ರಜಪೂತ್ ಸಿಕ್ಖರು ನೆರೆಯ ಮುಸ್ಲಿಂರಿಗೆ ಸಂಪೂರ್ಣ ರಕ್ಷಣೆಯಿತ್ತಿದ್ದಾರೆ. ಅನೇಕ ಮುಸ್ಲಿಂರು ಹಿಂದೂಸರೆಯುವರನ್ನು ನಂಬಿ ಮನೆಯ ಬೀಗದಕೈಗಳನ್ನು ಕೊಟ್ಟಿದ್ದಾರೆ.

ಭಾರತದ ಮುಸ್ಲಿಂ ಲೀಗ್ ವಿಸರ್ಜಿಸಿ ಮುಸ್ಲಿಂರೆಲ್ಲರೂ ಕಾಂಗ್ರೆಸ್ ಸೇರಬೇಕೆಂದು ಜರಾರಿನ ಮಾಜಿ ವಂತ್ರಿ ಜ || ಹಾರ್ಸ್ ನಾಗಪುರದಿಂದ ಪತ್ರಿಕಾ ಹೇಳಿಕೆಯಿತ್ತಿದ್ದಾರೆ.

ನನ್ನ ಜೀವವಿರುವ ವರೆಗೆ ಅಲ್ಪಸಂಖ್ಯಾತ ಹಿಂದೂ ರಕ್ಷಣೆ ಮಾಡುತ್ತೇನೆ ಎಂದು ಕಾಶ್ಮೀರದ ಶ್ರೀ. ಗುದಿಂದ ಸಂಸ್ಥಾನ ಪರಿಷತ್ತಿನ ಅಧ್ಯಕ್ಷ ಶೇಕ್ ಅಬ್ದುಲ್ಲ ಭಾವಸೆಯಿತ್ತಿದ್ದಾರೆ.

SHAKTI SUDHA

A Superb TONIC

ನೋಟೀನ್

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಇಲಾಖೆಗೆ ಕಚೇರಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಪೊಲೀಸರುಗಳು ಪುಷ್ಟಿಕರವಾದ ಮತ್ತು ಸರಿಯಾದ ಮೈಸಿನ ಎತ್ತುಗಳನ್ನು ಬಿಕ್ರಿಗಾಗಿ ತಾರೀಜು 16–10–47 ನೇ ಗುರುವಾರ ಸಾಯಂಕಾಲ ಮುನಿಸಿಪಲ್ ಆಫೀಸಿಗೆ ಹಾಜರಾಡಬಹುದು. ಖರೀದಿ ನಿಷ್ಕರ್ಷೆಯಾದ ಕೂಡ್ಲೇ ಮೊಬಲಗು ಪಾವತಿಮಾಡಲಾಗುತ್ತೆ.

(ಸಹಿ) ಇ. ಅನಂತರಾವ್

2–10–47 ಹೆಲ್ತ್ ಆಫೀಸರ್

ಮೈಸೂರು ಸಿಟಿ

SAVE THE COW

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೆ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾಗಿದೆ. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮಂತ್ರಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಿಗಳಲ್ಲಿಯೂ ಉಪಯೋಗಿಸಲ್ಪಡತ್ತದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು